ಅ)1) ರಾಜ್ಯ ಹಣಕಾಸು ಆಯೋಗದ ಅನುದಾನ ನೌಕರರ ವೇತನಕ್ಕಾಗಿ ನೀಡಲಾಗಿದೆ

2) ಹತ್ತನೇ ಹಣಕಾಸು ಆಯೋಗದ ಅನುದಾನ :

1) ರಸ್ತೆ ಕಾಮಗಾರಿಗಳು
2) ಚರಂಡಿ ಕಾಮಾಗಾರಿಗಳು
3) ಮಳಿಗೆಗಳ ನಿರ್ಮಾಣ

3) ಎಸ್‌ಜೆಎಸ್‌ಆರ್‌ವೈ ಯೋಜನೆಯ ಅನುದಾನ
(ನಗರ ಕೂಲಿ ಉದ್ಯೋಗ ಯೋಜನೆ)

1)	ರಸ್ತೆ ನಿರ್ಮಾಣ	ಬಡತನ ರೇಖೆಗಿಂತ
2)	ಚರಂಡಿ ನಿರ್ಮಾಣ	ಕೆಳಗೆ ಇರುವ
3)	ನಲ ಸಂಪರ್ಕ ಕಲ್ಪಿಸುವುದು	ಕುಟುಂಬಗಳ
4)	ಸಮುದಾಯ ಭವನ ನಿರ್ಮಾಣ	ಬಡಾವಣೆಗೆ

ಇ) ರಾಜ್ಯ ಹಣಕಾಸು ಆಯೋಗದ ಅನುದಾನವನ್ನು ನೌಕರರ ವೇತನಕ್ಕಾಗಿ ವಿನಿಯೋಗಿಸಿಕೊಳ್ಳಲಾಗಿದೆ. ಹತ್ತನೇ ಹಣಕಾಸು ಆಯೋಗದ ಅನುದಾನದಲ್ಲಿ 15.95 ಲಕ್ಷ ರೂ.ಗಳನ್ನು ಹಾಗೂ ಎಸ್‌ಜೆಎಸ್‌ಆರ್‌ವೈ (ನಗರ ಉದ್ಯೋಗ ಯೋಜನೆ) ಯೋಜನೆಯ ಅನುದಾನದಲ್ಲಿ 5.11 ಲಕ್ಷ ರೂ.ಗಳನ್ನು ಈವರೆಗೆ ವಿನಿಯೋಗಿಸಿಕೊಳ್ಳಲಾಗಿದೆ.

ರಾಜ್ಯದಲ್ಲಿ ಖನಿಜ ನಿಕ್ಷೇಪ.

3354(4139) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಚಿನ್ನ, ಬೆಳ್ಳಿ, ವಜ್ರ ಮತ್ತಿತರ ಅಮೂಲ್ಯ ಖನಿಜಗಳ ನಿಕ್ಷೇಪಗಳನ್ನು ಪತ್ತೆ ಹಚ್ಚುವ ಸರ್ವೇಕ್ಷಣಾ ಕಾರ್ಯಕ್ಕೆ ಪರವಾನಗಿ ನೀಡಿದ ಸಂಸ್ಥೆಗಳ ಒಟ್ಟು ಸಂಖ್ಯೆ ಎಷ್ಟು :

ಆ) ಆ ಸಂಸ್ಥೆಗಳು ಯಾವುವು ; (ವಿವರ ನೀಡುವುದು)

ಇ) ಈ ಸಂಸ್ಥೆಗಳು ರಾಜ್ಯದ ಯಾವ ಯಾವ ಭಾಗದಲ್ಲಿ ಸರ್ವೇಕ್ಷಣಾ ಕಾರ್ಯ ಮಾಡಲಿವೆ ; ಇದಕ್ಕಾಗಿ ಒಟ್ಟು ಎಷ್ಟು ಹಣ ಖರ್ಚು ಮಾಡಲಿವೆ ಮತ್ತು ಎಷ್ಟು ಕಿ.ಮಿ. ಪ್ರದೇಶದಲ್ಲಿ ಈ ಕಾರ್ಯ ನಡೆಯಲಿದೆ? (ಇದರ ಪೂರ್ಣ ಮಾಹಿತಿ ನೀಡುವುದು).

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :—

ಅ) 10

ಆ) 1. ಮೆ: ಎಸಿಸಿ ರಿಯೋಟಿಂಟೋ ಎಕ್ಸ್‌ಪ್ಲೋರೇಷನ್ ಲಿಮಿಟೆಡ್,
ಆರ್‌ಸಿಡಿ ಎಸಿಸಿ-ಸಿತವಿನ್ ಕಾಂಪ್ಲೆಕ್ಸ್
ಎಲ್‌ಬಿಎನ್ ಮಾರ್ಗ- ಥಾಣೆ (ಪಶ್ಚಿಮ)
400 604, ಮಹಾರಾಷ್ಟ್ರ - 02 ಪರಿವಾನಗಿಗಳು

2. ಮೆ: ಅಜಮಾನ್ ಇಂಡಿಯಾ ಪ್ರೈ. ಲಿ.
ಅಡ್ವಾನ್ಸ್‌ಡ್ ಬಿಸಿನೆಸ್ ಸೆಂಟರ್
ಮೇಕರ್ ಚೇಂಬರ್ -
6, ನಾರಿಮನ್ ಪಾಯಿಂಟ್
ಮುಂಬಯಿ 400 021, - 05 ಪರಿವಾನಗಿಗಳು

3. ಮೆ: ಜಿಯೋ ಮೈಸೂರು ಸರ್ವಿಸಸ್
(ಇಂಡಿಯಾ) ಪ್ರೈ. ಲಿ.
ಡೈರೆಕ್ಟರ್ ನಂ. 120:45 3ನೇ ಬ್ಲಾಕ್,
6ನೇ ಕ್ರಾಸ್ 8ನೇ "ಎ" ಮುಖ್ಯರಸ್ತೆ
ತ್ಯಾಗರಾಜನಗರ, ಬೆಂಗಳೂರು 560 028 - 03 ಪರಿವಾನಗಿಗಳು

ಒಟ್ಟು 10 ಪರಿವಾನಗಿಗಳು

ಇ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಕ್ರಮ ಸಂಖ್ಯೆ	ಸಂಸ್ಥೆಗಳ ಹೆಸರು	ಸರ್ವೇಕ್ಷಣಾ ಕಾರ್ಯ ಮಾಡಲಿರುವ ಜಿಲ್ಲೆಗಳು	ಖರ್ಚು ಮಾಡಲಿರುವ ಹಣ (ಲಕ್ಷ ರೂ. ಗಳಲ್ಲಿ)	ಪ್ರದೇಶದ ವಿಸ್ತೀರ್ಣ (ಚ.ಕಿ.ಮೀ. ಗಳಲ್ಲಿ)
1.	ಮೆ: ಎಸಿಸಿ ರಿಯೋ ಟಿಂಟೊ ಎಕ್ಸ್‌ಪ್ಲೋರೇಷನ್ ಲಿಮಿಟೆಡ್	ತುಮಕೂರು ಚಿತ್ರದುರ್ಗ	125	1320.00
2.	ಮೆ: ಎಸಿಸಿ ರಿಯೋ ಟಿಂಟೊ ಎಕ್ಸ್‌ಪ್ಲೋರೇಷನ್ ಲಿಮಿಟೆಡ್	ಚಿತ್ರದುರ್ಗ ತುಮಕೂರು ಬಳ್ಳಾರಿ ದಾವಣಗೆರೆ	425	2480.00

3.	ಮೆ: ಅಡಮಾನ್ ಇಂಡಿಯಾ ಪ್ರೈ ಲಿಮಿಟೆಡ್	ಗುಲ್ಬರ್ಗಾ	755	2000.50
4.	ಮೆ: ಅಡಮಾನ್ ಇಂಡಿಯಾ ಪ್ರೈ ಲಿಮಿಟೆಡ್	ಬಳ್ಳಾರಿ ಚಿತ್ರದುರ್ಗ ದಾವಣಗೆರೆ	742	1966.22
5.	ಮೆ: ಅಡಮಾನ್ ಇಂಡಿಯಾ ಪ್ರೈ ಲಿಮಿಟೆಡ್	ಗುಲ್ಬರ್ಗಾ ರಾಯಚೂರು	755	2000.00
6.	ಮೆ: ಅಡಮಾನ್ ಇಂಡಿಯಾ ಪ್ರೈ ಲಿಮಿಟೆಡ್	ಗುಲ್ಬರ್ಗಾ ರಾಯಚೂರು	377	1000.00
7.	ಮೆ: ಅಡಮಾನ್ ಇಂಡಿಯಾ ಪ್ರೈ ಲಿಮಿಟೆಡ್	ಚಿತ್ರದುರ್ಗ	308	817.50
8.	ಮೆ: ಜಿಯೋ ಮೈಸೂರು ಸರ್ವಿಸಸ್ (ಇಂಡಿಯಾ) ಪ್ರೈ ಲಿ.	ರಾಯಚೂರು	15	315.00
9.	ಮೆ: ಜಿಯೋ ಮೈಸೂರು ಸರ್ವಿಸಸ್ (ಇಂಡಿಯಾ) ಪ್ರೈ ಲಿ.	ಬಳ್ಳಾರಿ	--	126.00
10.	ಮೆ: ಜಿಯೋ ಮೈಸೂರು ಸರ್ವಿಸಸ್ (ಇಂಡಿಯಾ) ಪ್ರೈ ಲಿ.	ಗುಲ್ಬರ್ಗಾ	--	125.00
		ಒಟ್ಟು	3656	12150.22

ಬೇಸಿಗೆ ರಜೆಯ ನಂತರ ತಡವಾಗಿ ಪ್ರಾರಂಭವಾಗುವ ವಿದ್ಯಾರ್ಥಿನಿಲಯಗಳು.

3355(4130) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪ್ರತಿ ವರ್ಷ ಸರ್ಕಾರಿ ಮತ್ತು ಖಾಸಗಿ ಶಾಲೆಗಳು ಬೇಸಿಗೆ ರಜೆ ಮುಗಿದ ನಂತರ ಜೂನ್ ತಿಂಗಳಲ್ಲಿ ಶಾಲೆ ತೆರೆಯುವುದು ಸರ್ಕಾರದ ನೀತಿ ನಿಯಮವಾಗಿದೆಯೇ

ಆ) ಆದರೆ ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಹಾಗೂ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲಯಗಳು ಬೇಸಿಗೆ ರಜೆ ಮುಗಿದ ನಂತರ ಒಂದು ತಿಂಗಳು ತಡವಾಗಿ ಶಾಲೆ ತೆರೆಯಲು ಕಾರಣಗಳೇನು;